# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 250
2) ಸದಸ್ಯರ ಹೆಸರು : ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 28-01-2026
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ 5 ವರ್ಷಗಳಿಂದ ಇಲ್ಲಿಯವರೆಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಿಸಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ; | ಮತ್ಸ್ಯಾಶ್ರಯ ಯೋಜನೆಯಡಿ ಕಳೆದ 5 ವರ್ಷಗಳಿಂದ ಕಲಬುರಗಿ ಜಿಲ್ಲೆಗೆ ರೂ. 295.95 ಲಕ್ಷಗಳನ್ನು ಮತ್ತು ಯಾದಗಿರಿ ಜಿಲ್ಲೆಗೆ ರೂ. 8.65 ಲಕ್ಷಗಳನ್ನು ಬಿಡುಗಡೆ ಮಾಡಿದೆ. |
| ಆ) | ಬಿಡುಗಡೆ ಮಾಡಿದ ಅನುದಾನದಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬಿಡುಗಡೆ ಮಾಡಿದ ಅನುದಾನದಲ್ಲಿ ನಿರ್ಮಿಸಲಾದ ಮನೆಗಳ ವಿಧಾನಸಭಾ ಕ್ಷೇತ್ರವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಇ) | ಸದರಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ಯಾವ ಮಾನದಂಡಗಳನ್ನು ಅನುಸರಿಸುತ್ತದೆ ಹಾಗೂ ಇದುವರೆವಿಗೂ ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ವಿತರಿಸಲಾಗಿದೆ? | ಮತ್ಸ್ಯಾಶ್ರಯ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ:-<br>1) ಫಲಾನುಭವಿಯು ಹುಟ್ಟು / ವೃತ್ತಿಯಲ್ಲಿ ಮೀನುಗಾರನಾಗಿರಬೇಕು. ಮೀನುಗಾರಿಕೆಗೆ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಸಹ ಆಯ್ಕೆ ಮಾಡಬಹುದಾಗಿದೆ.<br>2) ಫಲಾನುಭವಿಯು ವಿವಾಹಿತನಾಗಿರಬೇಕು.<br>3) ಫಲಾನುಭವಿಯು ಸ್ವಂತ ನಿವೇಶನ ಹೊಂದಿರತಕ್ಕದ್ದು.<br>4) ಫಲಾನುಭವಿಯು ಸ್ಥಳೀಯ ಮೀನುಗಾರರ ಸಹಕಾರ ಸಂಘದ ಸದಸ್ಯನಾಗಿರಬೇಕು. ಇಲ್ಲದಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಡಗಿರುವ ಬಗ್ಗೆ ಸಂಬಂಧಿಸಿದ ಮೀನುಗಾರಿಕೆ ಸಹಾಯಕ ನಿರ್ದೇಶಕರು ದೃಢೀಕರಿಸಬೇಕು.<br>5) ಫಲಾನುಭವಿಯು ಸರ್ಕಾರದ ಇತರೆ ವಸತಿ ಯೋಜನೆಯಡಿ ಸೌಲಭ್ಯವನ್ನು ಪಡೆದಿರಬಾರದು. ಈ ಬಗ್ಗೆಸಂಬಂಧಪಟ್ಟ ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ, ನಗರಸಭೆ ಮುಂತಾದ ಸಂಸ್ಥೆಗಳಿಂದ ದೃಢೀಕರಣ ಹೊಂದಿರತಕ್ಕದ್ದು.<br>6) ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದವರಾಗಿರತಕ್ಕದ್ದು.<br>7) ಮನೆ ಅಳತೆ 215 ರಿಂದ 375 ಚದರ ಅಡಿ ಒಳಗೆ ಇರತಕ್ಕದ್ದು.<br>ಇದುವರೆವಿಗೂ ಮತ್ಸ್ಯಾಶ್ರಯ ಯೋಜನೆಯಡಿ ಕಲಬುರುಗಿ ಜಿಲ್ಲೆಗೆ 5 ವರ್ಷಗಳಲ್ಲಿ 558 ಮನೆಗಳನ್ನು ಮತ್ತು ಯಾದಗಿರಿ ಜಿಲ್ಲೆಗೆ 168 ಮನೆಗಳನ್ನು ವಿತರಿಸಲಾಗಿರುತ್ತದೆ. |

ಸಂಖ್ಯೆ: ಪಸಂಮೀ ಇ-15 ಮೀಇಯೋ 2026

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಅನುಬಂಧ-1

2020-21 ರಿಂದ 2024-25ನೇ ಸಾಲಿನವರೆಗೆ ಮತ್ಸ್ಯಾಶ್ರಯ ಯೋಜನೆಯಡಿ ಕಲಬುರುಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನ ಮತ್ತು ಮಂಜೂರಾದ ಮನೆಗಳ ವಿವರ

**ಜಿಲ್ಲೆ:- ಕಲಬುರಗಿ**

| ಕ್ರ. ಸಂ | ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ | ವರ್ಷ | | | | | | | | | |
|---|---|---|---|---|---|---|---|---|---|---|---|
| | | | | | | | | (ರೂ.ಲಕ್ಷಗಳಲ್ಲಿ) | | | |
| | | 2020-21 | | 2021-22 | | 2022-23 | | 2023-24 | | 2024-25 | |
| | | ಬಿಡುಗಡೆಯಾದ ಅನುದಾನ | ನಿರ್ಮಿಸಲಾದ ಮನೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ | ನಿರ್ಮಿಸಲಾದ ಮನೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ | ನಿರ್ಮಿಸಲಾದ ಮನೆಗಳ ಸಂಖ್ಯೆ | ಬಿಡುಗಡೆಯಾದ ಅನುದಾನ | ಮಂಜೂರಾದ ಮನೆಗಳ ಸಂಖ್ಯೆ | ಬೇಕಾದ ಅನುದಾನ | ಮಂಜೂರಾದ ಮನೆಗಳ ಸಂಖ್ಯೆ |
| 1 | ಅಫಜಲಪುರ | - | - | - | - | 26.05 | 19 | - | - | 31.50 | 25 |
| 2 | ಜೇವರ್ಗಿ | - | - | - | - | 33.30 | 25 | - | - | 31.50 | 25 |
| 3 | ಚಿತ್ತಾಪುರ | - | - | - | - | 45.20 | 35 | - | - | 103.50 | 81 |
| 4 | ಸೇಡಂ | - | - | - | - | 133.20 | 100 | - | - | 31.50 | 25 |
| 5 | ಚಿಂಚೋಳಿ | - | - | - | - | 19.00 | 14 | - | - | 40.25 | 30 |
| 6 | ಕಲಬುರಗಿ (ಗ್ರಾ) | | | | | 17.80 | 13 | | | 31.50 | 25 |
| 7 | ಕಲಬುರಗಿ (ದ) | | | | | 2.40 | 2 | | | 94.50 | 75 |
| 8 | ಕಲಬುರಗಿ(ಉ) | - | - | - | - | 0.00 | 0 | - | - | 31.50 | 25 |
| 9 | ಆಳಂದ | - | - | - | - | 19.00 | 14 | - | - | 31.50 | 25 |
| **ಒಟ್ಟು** | | **-** | **-** | **-** | **-** | **295.95** | **222** | | | **427.25** | **336** |

**ಜಿಲ್ಲೆ:- ಯಾದಗಿರಿ**

| ಕ್ರ. ಸಂ | ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ | 2020-21 ಬಿಡುಗಡೆಯಾದ ಅನುದಾನ | 2020-21 ನಿರ್ಮಿಸಲಾದ ಮನೆಗಳ ಸಂಖ್ಯೆ | 2021-22 ಬಿಡುಗಡೆಯಾದ ಅನುದಾನ | 2021-22 ನಿರ್ಮಿಸಲಾದ ಮನೆಗಳ ಸಂಖ್ಯೆ | 2022-23 ಬಿಡುಗಡೆಯಾದ ಅನುದಾನ | 2022-23 ನಿರ್ಮಿಸಲಾದ ಮನೆಗಳ ಸಂಖ್ಯೆ | 2023-24 ಬಿಡುಗಡೆಯಾದ ಅನುದಾನ | 2023-24 ಮಂಜೂರಾದ ಮನೆಗಳ ಸಂಖ್ಯೆ | 2024-25 ಬೇಕಾದ ಅನುದಾನ | 2024-25 ಮಂಜೂರಾದ ಮನೆಗಳ ಸಂಖ್ಯೆ |
|---|---|---|---|---|---|---|---|---|---|---|---|
| 1 | ಸುರಪುರ | - | - | - | - | - | 10 | - | - | 31.5 | 25 |
| 2 | ಶಹಾಪುರ | - | - | - | - | 2.1 | 5 | - | - | 35.7 | 28 |
| 3 | ಯಾದಗಿರಿ | - | - | - | - | - | 15 | - | - | 40.25 | 30 |
| 4 | ಗುರುಮಿಠಕಲ್ | - | - | - | - | 6.55 | 30 | - | - | 31.5 | 25 |
| **ಒಟ್ಟು** | | - | - | - | - | **8.65** | **60** | - | - | **138.95** | **108** |

ಮೀನುಗಾರಿಕೆ ನಿರ್ದೇಶಕರು

27/01/26